# ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎ. ಶರವಣರವರ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವ ಕುರಿತು

ವಿಷಯ: ಈ ಕೆಳಕಂಡ ಸಾರ್ವಜನಿಕ ಮಹತ್ವದ ವಿಷಯವನ್ನು ಇಂದು ದಿನಾಂಕ 09-12-2025 ರಂದು ಸದನದ " ಶೂನ್ಯ ವೇಳೆಯಲ್ಲಿ " ಪ್ರಸ್ತಾಪಿಸಲು ಬಯಸುತ್ತೇನೆ.

ಒಂದು ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯ ನಿರೀಕ್ಷೆ ಮೂಡಿಸಿದ್ದ ಮತ್ತು ಕಲ್ಯಾಣ ಕರ್ನಾಟಕ ಭಾಗದ ಲಕ್ಷಂತರ ಹತ್ತಿ ಬೆಳೆಗಾರರಿಗೆ ಉತ್ತಮ ಮಾರುಕಟ್ಟೆಯ ಆಶಾಕಿರಣವಾಗಿದ್ದ ಪಿಎಂ ಮಿತ್ರಾ ಮಗಾ ಜವಳಿ ಪಾರ್ಕ ಯೋಜನೆ ಕಲಬುರಗಿಯಲ್ಲಿ ಆರಂಭವಾಗುವ ಮೊದಲೇ ವಿಳಂಬದ ಸುಳಿಯಲ್ಲಿ ಸಿಲುಕಿದೆ.

2023ರ ಮಾರ್ಚನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೇಶದ ಇತರ ಆರು ಪಾರ್ಕಗಳೊಂದಿಗೆ ಏಕಕಾಲಕ್ಕೆ ಅಡಿಗಲ್ಲು ಹಾಕಿದ್ದರೂ, ಇಲ್ಲಿನ ಒಂದು ಸಾವಿರ ಎಕರೆ ಪ್ರದೇಶದಲ್ಲಿ ಇದುವರೆಗೆ ಕನಿಷ್ಠ ಮೂಲ ಸೌಕರ್ಯ ಒದಗಿಸುವ ಕೆಲಸವೂ ಆಗದೇ ಯೋಜನೆ ಕೇವಲ ಕನಸಾಗಿಯೇ ಉಳಿದಿದೆ.

ನಂದಿಸಿನ್ನೂರು, ಹೊನ್ನಕಿರಣಗಿ ಮತ್ತು ಫಿರೋಜಾಬಾದ್ ಗ್ರಾಮಗಳ ವ್ಯಾಪ್ತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರದ ಜಂಟಿ ಸಹಭಾಗಿತ್ವದಲ್ಲಿ ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ ಸ್ಥಾಪಿಸಲು ಜಾಗವನ್ನು ಮೀಸಲಿಡಲಾಗಿದೆ. ಆದರೆ, ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಾದ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದಾಗಿ ಈ ಮಹತ್ವದ ಯೋಜನೆಯು ಮರಳು ಗಾಡಿಯಲ್ಲಿ ನಿಂತ ನೀರಿನಂತಾಗಿದೆ. ಮೂಲ ಸೌಕರ್ಯ ಕೊರತೆ ಪಿಎಂ ಮಿತ್ರಾ ಪಾರ್ಕಗೆ ಜೀವ ತುಂಬಲು ಅಗತ್ಯವಿರುವ ಮೂಲ ಸೌಕರ್ಯಗಳು ಕೇವಲ ಕಾಗದದ ಮೇಲೆಯೇ ಉಳಿದಿವೆ. ರಾಷ್ಟ್ರೀಯ ಹೆದ್ದಾರಿಯಿಂದ ಸ್ಥಳದವರೆಗೆ 1.43 ಕಿ.ಮಿ. ಉದ್ದದ ಜೋಡಿ ರಸ್ತೆ ನಿರ್ಮಾಣವಾಗಬೇಕಿದೆ. ಕೈಗಾರಿಕಾ ಚಟುವಟಿಕೆಗಳಿಗೆ 12.09 ಎಂ.ಎಲ್.ಡಿ. ನೀರು ಬೇಕಿದ್ದು, ಗೃಹ ಬಳಕೆಗೆ 3.63 ಎಂಎಲ್ಡಿ ನೀರು ಅಗತ್ಯವಿದೆ. ಜೇವರ್ಗಿ ತಾಲೂಕಿನ ಮದ್ರಿ ಬಳಿ 35 ಕೋಟಿ ವೆಚ್ಚದಲ್ಲಿ ಅಣೆಕಟ್ಟು ನಿರ್ಮಿಸಿ, ನಂದಿಕೂರು ಗ್ರಾಮದ ಬಳಿ ಪೈಪ್‌ಲೈನ್ ಅಳವಡಿಸಬೇಕಿದೆ. 180 ಮೆಗಾ ವ್ಯಾಟ್ ವಿದ್ಯುತ ಸ್ಟೇಷನ್ ನಿರ್ಮಾನ ಆಗಬೇಕಿದೆ.

50 ಕೋಟಿ ರೂ. ಮೀಸಲು: ಮೂಲ ಸೌಕರ್ಯ ಒದಗಿಸಲು ಕೆಕೆಆರ್‌ಡಿಬಿ ವತಿಯಿಂದ ಕಳೆದ ವರ್ಷ ಮೀಸಲಿಟ್ಟ 50 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಆದರೆ, ಕೆಲಸ ಆರಂಭವಾಗದ ಕಾರಣ ಮೀಸಲಿಟ್ಟ ಅನುದಾನ ಬಳಕೆಯಾಗಲಿಲ್ಲ. ಪ್ರಸಕ್ತ ವರ್ಷವೂ 59.90 ಕೋಟಿ ರೂ. (ಸಾಮಾನ್ಯ ಅನುದಾನದಲ್ಲಿ 30.90 ಕೋಟಿ ರೂ. ಮತ್ತು ಮ್ಯಾಕ್ರೋದಲ್ಲಿ 20 ಕೋಟಿ ರೂ) ಹಣ ಮೀಸಲಿಡಲಾಗಿದ್ದರೂ, ಕಾಮಗಾರಿ ಆರಂಭವಾಗದೇ ಅನುದಾನ ಸದ್ಬಳಕೆಯಾಗುವ ಸಾಧ್ಯತೆ ಕ್ಷೀಣಿಸಿದೆ.

ಈ ಕಾಮಗಾರಿ ಶೀಘ್ರವಾಗಿ ಜಾರಿಗೆ ಬರುವಂತೆ ಸರ್ಕಾರ ಕ್ರಮ ವಹಿಸಬೇಕೆಂದು ಒತ್ತಾಯಿಸುತ್ತೇನೆ. ಸದರಿ ವಿಷಯವೂ ದೈನಂದಿನ ದಿನಪತ್ರಿಕೆಯಾದ ವಿಶ್ವವಾಣಿಯಲ್ಲಿ ಪ್ರಕಟವಾದ ನಕಲು ಪ್ರತಿ ಒದಗಿಸುತ್ತೇನೆ.

ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ

ಉಲ್ಲೇಖ: ಟಿ.ಎ. ಶರವಣ ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತ ಇವರ ಪತ್ರ ಸಂಖ್ಯೆ 009 ದಿನಾಂಕ ಇಲ್ಲ

*****

- ಕೇಂದ್ರ ಸರ್ಕಾರದ 2021-22 ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ದೇಶದಾದ್ಯಂತ 07 ಮೆಗಾ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲು ಘೋಷಿಸಲಾಗಿರುತ್ತದೆ.

- ಅದರನ್ವಯ ಭಾರತ ಸರ್ಕಾರದ ಜವಳಿ ಮಂತ್ರಾಲಯವು ದೇಶಾದ್ಯಂತ 1. ತಮಿಳುನಾಡು 2. ಕರ್ನಾಟಕ 3. ಗುಜರಾತ್ 4. ಮಧ್ಯಪ್ರದೇಶ 5. ಉತ್ತರಪ್ರದೇಶ 6. ತೆಲಂಗಾಣ 7. ಮಹಾರಾಷ್ಟ್ರ ಹೀಗೆ ಒಟ್ಟು ಏಳು (07) ರಾಜ್ಯಗಳಲ್ಲಿ PM-MITRA Park ಸ್ಥಾಪನೆಗೆ ತೀರ್ಮಾನಿಸಿರುತ್ತದೆ.

- PM-MITRA Park ನ್ನು ಕರ್ನಾಟಕದಲ್ಲಿ ಸ್ಥಾಪಿಸಲು ಅಗತ್ಯ ರೂಪುರೇಷೆಗಳನ್ನು / Feasibility Reports / Proposals and DPR ಗಳನ್ನು ಸಿದ್ಧಪಡಿಸುವ ಸಲುವಾಗಿ **M/s. Wazir Advisors, Gurgaon, Hariyana** ರವರನ್ನು Transaction Advisor ಆಗಿ ಇ-ಟೆಂಡರ್ ಪ್ರಕ್ರಿಯೆ ಮೂಲಕ ದಿನಾಂಕ : 31-01-2023 ರಂದು ನೇಮಿಸಿಕೊಳ್ಳಲಾಯಿತು.

- ನಂತರ ಕರ್ನಾಟಕದಲ್ಲಿ ಕಲಬುರಗಿ ಮತ್ತು ವಿಜಯಪುರದಲ್ಲಿ PM-MITRA Park ನ್ನು ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದಿಂದ 02 ಪ್ರಸ್ತಾವನೆಗಳನ್ನು ಸಲ್ಲಿಸಲಾಯಿತು.

- ಮೇಲ್ಕಂಡ 02 ಪ್ರಸ್ತಾವನೆಗಳಲ್ಲಿ ಕರ್ನಾಟಕ ರಾಜ್ಯದ ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ಕಿರಣಗಿ, ನದಿಸಿನ್ನೂರು ಹಾಗೂ ಫಿರೋಜಾಬಾದ್ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಡಿ 1000 ಎಕರೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಒಡೆತನದಲ್ಲಿ ಮೆಗಾ ಜವಳಿ ಪಾರ್ಕ್‌ನ್ನು SPV (Special Purpose Vehicle – A company established under Companies Act - 2013) ಮೂಲಕ ಸ್ಥಾಪಿಸಲು ದಿನಾಂಕ:17.03.2023 ರಂದು ಘೋಷಿಸಿದ್ದು, ದಿನಾಂಕ: 28.03.2023 ರಂದು ಕಲಬುರ್ಗಿಯಲ್ಲಿ ಪಾರ್ಕ್ ಸ್ಥಾಪನೆಗೆ ಉದ್ಘಾಟನಾ ಕಾರ್ಯಕ್ರಮದ ಮೂಲಕ ಚಾಲನೆ ನೀಡಲಾಗಿರುತ್ತದೆ.

- ಉದ್ಘಾಟನಾ ಕಾರ್ಯಕ್ರಮದಲ್ಲಿ, ಉದ್ದೇಶಿತ ಜವಳಿ ಪಾರ್ಕ್ ನಲ್ಲಿ ಜವಳಿ ಉದ್ದಿಮೆ ಸ್ಥಾಪಿಸಲು ಆಸಕ್ತಿ ಹೊಂದಿರುವ 08 ಜವಳಿ ಉದ್ದಿಮೆದಾರರು ರಾಜ್ಯ ಸರ್ಕಾರದೊಂದಿಗೆ ರೂ.1700.00 ಕೋಟಿಗಳ ಬಂಡವಾಳ ಹೂಡಿಕೆ ಮಾಡಲು MOU (ಒಡಂಬಡಿಕೆ) ಮಾಡಿಕೊಂಡಿರುತ್ತಾರೆ.

- ಕೇಂದ್ರ ಸರ್ಕಾರದ Project Approval Committee ಯ ದಿನಾಂಕ: 25.08.2023 ರ ನಡವಳಿಯ ಮೇರೆಗೆ ಕಲಬುರ್ಗಿಯಲ್ಲಿ Green Field PM-MITRA Park ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ.

- ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರವು ಜಂಟಿಯಾಗಿ ದಿನಾಂಕ: 28.03.2023 ರಂದು MOU (ಒಡಂಬಡಿಕೆ) ಪತ್ರಕ್ಕೆ ಸಹಿ ಮಾಡಲಾಯಿತು ಹಾಗೂ ಈ ಸಂಬಂಧದ SPV ರಚನೆಗೆ ಸಂಬಂಧಿಸಿದ Joint Venture (JV) ನ್ನು ದಿನಾಂಕ: 11.03.2024 ರಂದು ಸಹಿ ಮಾಡಲಾಗಿರುತ್ತದೆ.

- ಮೇಲೆ ಉಲ್ಲೇಖಿಸಿದ Special Purpose Vehicle (ಎಸ್.ಪಿ.ವಿ) ಕಂಪನಿಯು ದಿನಾಂಕ: 27-03-2024 ರಂದು ಕಂಪನಿ ಕಾಯ್ದೆಯನ್ವಯ Pradhan Mantri Mega Integrated Textile Regions and Apparels (PM-MITRA) Park Karnataka Ltd, ಎಂಬ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ. ಸದರಿ ಎಸ್.ಪಿ.ವಿಯ ಆಡಳಿತ ಮಂಡಳಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

| ಕ್ರ. ಸಂ. | ಹುದ್ದೆ | ಎಸ್‌ಪಿವಿ ಪದನಾಮ |
|---|---|---|
| 1. | ಕಾರ್ಯದರ್ಶಿ, ಜವಳಿ ಮಂತ್ರಾಲಯ, ಭಾರತ ಸರ್ಕಾರ | ಅಧ್ಯಕ್ಷರು |
| 2. | ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ | ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO) |
| 3. | ಅಪರ ಕಾರ್ಯದರ್ಶಿ, ಜವಳಿ ಮಂತ್ರಾಲಯ, ಭಾರತ ಸರ್ಕಾರ | ನಿರ್ದೇಶಕರು |
| 4. | ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ಸರ್ಕಾರ | ನಿರ್ದೇಶಕರು |
| 5. | ಭಾರತ ಸರ್ಕಾರದ ನಾಮ ನಿರ್ದೇಶಿತರು | ನಿರ್ದೇಶಕರು |
| 6. | ಕರ್ನಾಟಕ ಸರ್ಕಾರದ ನಾಮ ನಿರ್ದೇಶಿತರು | ನಿರ್ದೇಶಕರು |

- ಸದರಿ ಕಂಪನಿಯಲ್ಲಿ ರಾಜ್ಯ ಸರ್ಕಾರದ ಷೇರು ಶೇ.51 ರಷ್ಟು ರೂ.5.10 ಕೋಟಿ ಹಾಗೂ ಕೇಂದ್ರ ಸರ್ಕಾರದ ಷೇರು ಶೇ.49ರ ರೂ.4.90 ಕೋಟಿಗಳು ಹೀಗೆ ಒಟ್ಟು ರೂ.10.00 ಕೋಟಿಗಳನ್ನು ಷೇರು ಬಂಡವಾಳವಾಗಿ ಹೂಡಿಕೆ ಮಾಡಲಾಗಿದೆ.
- ರಾಜ್ಯ ಸರ್ಕಾರದ Power Corporation Karnataka Ltd., ಸಂಸ್ಥೆಗೆ ಸೇರಿದ್ದ 1000 ಎಕರೆ ಜಾಗವನ್ನು ಜವಳಿ ಪಾರ್ಕ್ ಸ್ಥಾಪನೆಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 27.05.2024 ರಂದು ರಾಜ್ಯ ಸರ್ಕಾರದಿಂದ ಮಂಜೂರಾತಿ ನೀಡಲಾಗಿರುತ್ತದೆ. ಅದರನ್ವಯ ಪಿ.ಸಿ.ಕೆ.ಎಲ್ ನಿಂದ 1000 ಎಕರೆ ಜಾಗವನ್ನು ಇಲಾಖೆಗೆ ಹಸ್ತಾಂತರಿಸಿಕೊಳ್ಳಲಾಗಿರುತ್ತದೆ.

  ನಂತರ ರಾಜ್ಯ ಸರ್ಕಾರದ ದಿನಾಂಕ: 18.10.2024ರ ಆದೇಶದನ್ವಯ ಜವಳಿ ಇಲಾಖೆಯಿಂದ ಉಲ್ಲೇಖಿತ 1000 ಎಕರೆ ಜಮೀನನ್ನು 99 ವರ್ಷಗಳ ಅವಧಿಗೆ ಪ್ರತಿ ಎಕರೆಗೆ ರೂ.1 ರ ಸಾಂಕೇತಿಕ ದರದಲ್ಲಿ SPVಗೆ ದಿನಾಂಕ: 22.10.2024 ರಂದು ಹಸ್ತಾಂತರಿಸಲಾಗಿರುತ್ತದೆ ಹಾಗೂ ಉಲ್ಲೇಖಿತ ಪೂರ್ಣ ಜಮೀನನ್ನು SPV ಹೆಸರಿನಲ್ಲಿ ನೋಂದಾಯಿಸಲಾಗಿದೆ.

- ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಧ್ಯೆ ಆಗಿರುವ ಒಪ್ಪಂದದ ಪ್ರಕಾರ, ಉಲ್ಲೇಖಿತ ಜವಳಿ ಪಾರ್ಕ್ ಅಭಿವೃದ್ಧಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ರಾಜ್ಯ ಸರ್ಕಾರವು ಒದಗಿಸಬೇಕಾಗಿರುತ್ತದೆ.

- ಜೊತೆಗೆ PM-MITRA Park ನಲ್ಲಿ ಸ್ಥಾಪಿತವಾಗುವ ಜವಳಿ ಘಟಕಗಳಿಗೆ ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.5/-ಕ್ಕಿಂತ ಕಡಿಮೆ ದರದಲ್ಲಿ ವಿದ್ಯುತ್ ಹಾಗೂ ಪ್ರತಿ 1000 ಲೀಟರ್‌ಗಳಿಗೆ ರೂ.24/-ರಂತೆ (Rs.24 per KLD) ನೀರು ಸರಬರಾಜು ಮಾಡಲು ರಾಜ್ಯ ಸರ್ಕಾರವು ಒಪ್ಪಿಗೆ ನೀಡಿರುತ್ತದೆ.

- ಮೇಲ್ಕಂಡ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ತನ್ನ 2024-25ನೇ ಸಾಲಿನ ಆಯವ್ಯಯ ಕಂಡಿಕೆ-329ರಲ್ಲಿ **"ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕಲಬುರಗಿ ಜಿಲ್ಲೆಯ 1,000 ಎಕರೆ ಪ್ರದೇಶದಲ್ಲಿ ಪಿ.ಪಿ.ಪಿ ಮಾದರಿಯಲ್ಲಿ ಮೆಗಾ ಜವಳಿ ಪಾರ್ಕ್‌ನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ 1 ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ಸೃಜನೆಯಾಗುವ ನಿರೀಕ್ಷೆಯಿದೆ"** ಎಂದು ಘೋಷಿಸಿದ್ದು, ಸದರಿ ಯೋಜನೆಗೆ ಒದಗಿಸಬೇಕಾದ ಮೂಲಸೌಕರ್ಯಗಳ ಕಾಮಗಾರಿ ಅನುಷ್ಠಾನಕ್ಕಾಗಿ ರೂ.390.26 ಕೋಟಿಗಳ ಅನುದಾನ ಒದಗಿಸಲು ರಾಜ್ಯದ ಸಚಿವ ಸಂಪುಟವು ನಿರ್ಣಯಿಸಿ ಆದೇಶ ಸಂಖ್ಯೆ: CI 170 JAKE 2019 (P-5), ದಿನಾಂಕ:03.10.2024 ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ.

**State Government**

| Name of the Agency and work | Amount (Rs. in Crores) |
|---|---|
| PWD Kalaburagi-1.43 km Road and CC Drain | 13.48 |
| KUWSDB (water Supply)-Drinking water and Treated water Pipeline | 116.00 |
| Minor Irrigation (MI)-Barrage | 35.00 |
| KPTCL Power Station | 229.29 |
| **Total** | **393.77** |

- ಮೇಲ್ಕಂಡ ರೂ.393.77 ಕೋಟಿಗಳಲ್ಲಿ ವಾರ್ಷಿಕ ರೂ.50.00 ಕೋಟಿಯಂತೆ 03 ವರ್ಷಗಳ ಅವಧಿಗೆ ರೂ.150.00 ಕೋಟಿಗಳನ್ನು ಕೆ.ಕೆ.ಆರ್.ಡಿ.ಬಿ ಯಿಂದ ಭರಿಸಲು ಹಾಗೂ ಉಳಿದ ಮೊತ್ತವನ್ನು ರಾಜ್ಯ ಸರ್ಕಾರದ ಆಯವ್ಯದಲ್ಲಿ ಭರಿಸಲು ಆದೇಶಿಸಲಾಗಿದೆ.

- ಈ ನಿಟ್ಟಿನಲ್ಲಿ ಕೆ.ಕೆ.ಆರ್.ಡಿ.ಬಿ ಇಂದ 2024-25 ನೇ ಸಾಲಿಗೆ ಬಜೆಟ್ ಪ್ಯಾರದ ಸಾಮಾನ್ಯ ಕಾರ್ಯಕ್ರಮದಡಿ ರೂ.30.90 ಕೋಟಿ ಮತ್ತು ಮ್ಯಾಕ್ರೋ ಉಪಯೋಜನೆಯಡಿಯಲ್ಲಿ ರೂ.20.00 ಕೋಟಿಗಳ ಅನುದಾನವನ್ನು ಹೀಗೆ ಒಟ್ಟುರೂ.50.90 ಕೋಟಿಗಳ ವಿವಿಧ ಮೂಲಭೂತ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಷ್ಠಾನ ಇಲಾಖೆಗಳಿಗೆ ಅನುಮೋದಿತ ಅನುದಾನ ಬಿಡುಗಡೆ ಮಾಡುವಂತೆ ಕೆ.ಕೆ.ಆರ್.ಡಿ.ಬಿ ರವರಿಗೆ ಸೂಚಿಸಿ, ಅನುಷ್ಠಾನ ಇಲಾಖೆಗಳಿಗೆ ಟೆಂಡರ್ ಪ್ರಕ್ರಿಯೆಯನ್ನು ಶೀಘ್ರವಾಗಿ ಕೈಗೊಳ್ಳಲು ನಿರ್ದೇಶಿಸಲಾಗಿರುತ್ತದೆ.

- ಈ ಯೋಜನೆಯ ಅನುಷ್ಠಾನಕ್ಕಾಗಿ ಅರಣ್ಯ, ಪರಿಸರ ಮತ್ತು ಜೀವವಿಜ್ಞಾನ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಾಗಿದ್ದು, ಈ ಬಗ್ಗೆ PM-MITRA Park ನ Environmental Impact Assessment ಮಾಡಲು Environmental Clearance (EC) ನ್ನು ಪಡೆಯುವ ಸೇವೆ ಒದಗಿಸಲು M/s. Hubert Enviro Care Systems Pvt Ltd, Chennai, Tamilunadu ಈ ಸಂಸ್ಥೆಯನ್ನು ಇ-ಟೆಂಡರ್ ಪ್ರಕ್ರಿಯೆ ಮೂಲಕ ಆಯ್ಕೆ ಮಾಡಿ ದಿನಾಂಕ: 01.10.2024 ರಂದು ಕಾರ್ಯಾದೇಶ ನೀಡಲಾಯಿತು.

- M/s. Hubert Enviro Care Systems Pvt Ltd, ಸಂಸ್ಥೆಯು ಅಗತ್ಯ Environmental Impact Assessment ಗಾಗಿ ಮಾಹಿತಿ ಕಲೆಹಾಕಿ ಪರಿಸರ ಇಲಾಖೆಯ ಪರ್ವೇಶ್ ಪೋರ್ಟಲ್ ನಲ್ಲಿ ದಿನಾಂಕ: 02.05.2025 ರಂದು Application for Terms of Reference ಗಾಗಿ ಅಪ್‌ಲೋಡ್ ಮಾಡಲಾಯಿತು. ಪರಿಸರ ಇಲಾಖೆಯು ದಿನಾಂಕ: 08.07.2025 ರಂದು Terms of Reference for Impact Assessment ನ್ನು ಬಿಡುಗಡೆ ಮಾಡಿರುತ್ತದೆ. ಸದರಿ Terms of Reference ಅನ್ವಯ M/s. Hubert Enviro Care Systems Pvt Ltd, ಸಂಸ್ಥೆಯು Environmental Impact Assessment ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಅಂಕಿ-ಅಂಶ/ದಾಖಲಾತಿಗಳನ್ನು ಕ್ರೋಢೀಕರಿಸಿ ಪರಿಸರ ಇಲಾಖೆಯ ಪರ್ವೇಶ್ ಪೋರ್ಟಲ್ ನಲ್ಲಿ Application for Environmental Clearance (EC) ಯನ್ನು ಅಪ್‌ಲೋಡ್ ಮಾಡಲಾಗಿರುತ್ತದೆ. ಈ ಬಗ್ಗೆ ಪರಿಸರ ಇಲಾಖೆಯಿಂದ ದಿನಾಂಕ: 05.08.2025, ದಿನಾಂಕ: 22.08.2025 ಮತ್ತು 25.08.2025 ರಂದು ಪ್ರಶ್ನೆಗಳು ಸ್ವೀಕೃತವಾಗಿದ್ದು, ಅವುಗಳಿಗೆ ಉತ್ತರಗಳನ್ನು ಸಲ್ಲಿಸಲಾಯಿತು. ನಂತರ ಪರಿಸರ ಇಲಾಖೆಯ ಸಭೆಯು ದಿನಾಂಕ: 29.08.2025 ರಂದು ಜರುಗಿದ್ದು, EC ನೀಡಲು ಸಮುಚಿತ ಪ್ರಾಧಿಕಾರವಾದ SEAC Authority ಗೆ ಶಿಫಾರಸ್ಸು ಮಾಡಡಲಾಯಿತು. ದಿನಾಂಕ: 10.09.2025 ರಂದು ಜರುಗಿದ SEAC Authority ಸಭೆಯಲ್ಲಿ ಉಲ್ಲೇಖಿತ Environmental Impact Assessment ರಿಪೋರ್ಟ್ ಅನುಮೋದನೆಯಾಗಿ ದಿನಾಂಕ: 27.10.2025 ರಂದು ಸಹಿ ಮಾಡಿದ Environmental Clearance (EC) ಯನ್ನು ಪಡೆಯಲಾಗಿದೆ.

- ಜೋಡಿ ರಸ್ತೆ ಎರಡೂ ಬದಿ ಕಾಂಕ್ರೀಟ್ ಚರಂಡಿ ನಿರ್ಮಾಣಕ್ಕೆ ದಿನಾಂಕ: 13.02.2025 ರಂದು, ಲೋಕೋಪಯೋಗಿ ಇಲಾಖೆ, ಕಲಬುರಗಿರವರು ಟೆಂಡರ್ ಆಹ್ವಾನಿಸಿದ್ದು, ರೂ.3.50 ಕೋಟಿಗಳ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲು Sri Abdul Rasheed ರವರು ಆಯ್ಕೆಯಾಗಿರುತ್ತಾರೆ. ಸದರಿಯವರಿಗೆ ದಿನಾಂಕ: 26.05.2025 ರಂದು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಾರಂಭವಾಗಿರುತ್ತದೆ.

- ಪಿಎಂ ಮಿತ್ರ ಪಾರ್ಕ್ ಯೋಜನಾ ಪ್ರದೇಶದಿಂದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:50 ಕ್ಕೆ ಸಂಪರ್ಕ ಕಲ್ಪಿಸುವ 1.43 ಕಿ.ಮೀ ಉದ್ದದ ವಿಭಜಕದೊಂದಿಗೆ ಜೋಡಿ ರಸ್ತೆ ನಿರ್ಮಾಣಕ್ಕಾಗಿ ರೂ.9.98 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು, PWD, ಕಲಬುರಗಿ ವಿಭಾಗದ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ದೊರೆತಿರುವುದರಿಂದ, ದಿನಾಂಕ: 13.02.2025 ರಂದು ಲೋಕೋಪಯೋಗಿ ಇಲಾಖೆ, ಕಲಬುರಗಿರವರು ಟೆಂಡರ್ ಆಹ್ವಾನಿಸಿದ್ದು, ರೂ.9.98 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲು M/s. J S Infra ರವರು ಆಯ್ಕೆಯಾಗಿರುತ್ತಾರೆ. ಸದರಿಯವರಿಗೆ ದಿನಾಂಕ: 07.05.2025 ರಂದು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಾರಂಭವಾಗಿರುತ್ತದೆ.

- ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಲಬುರಗಿರವರು ಉದ್ದೇಶಿತ ಜವಳಿ ಪಾರ್ಕ್‌ಗೆ 3.63 MLD ಪ್ರಮಾಣದ ನೀರು ಹರಿಸಲು ಜೇವರ್ಗಿ ತಾಲೂಕಿನ ಮದ್ರಿ ಗ್ರಾಮ ಬಳಿ ಭೀಮಾ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಿಸಲು ಸಲ್ಲಿಸಿರುವ ರೂ.35.00 ಕೋಟಿಗಳ ಅಂದಾಜು ಪಟ್ಟಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಅದರನ್ವಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆ, ಕಲಬುರಗಿ ವಿಭಾಗ ದಿನಾಂಕ: 24.02.2025 ರಂದು ಟೆಂಡರ್ ಕರೆಯಲಾಗಿದ್ದು, ದಿನಾಂಕ: 11.03.2025 ರಂದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮುಕ್ತಾಯವಾಗಿದ್ದು, ತಾಂತ್ರಿಕ ಬಿಡ್ ಪರಿಶೀಲನಾ ಹಂತದಲ್ಲಿರುತ್ತದೆ.

- ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಲಬುರಗಿರವರು ಉದ್ದೇಶಿತ ಜವಳಿ ಪಾರ್ಕ್‌ಗೆ ನಂದಿಕೂರು STP ಕಲಬುರಗಿಯಿಂದ 12.09 MLD ಪ್ರಮಾಣದ ಸಂಸ್ಕರಿಸಿದ ನೀರನ್ನು [22.35 MLD (15.35 MLD + 7 MLD ಸಮತೋಲನ) ಸಂಸ್ಕರಿಸದ ನೀರನ್ನು ಅಗತ್ಯವಿದೆ] ಒದಗಿಸುವುದು ಮತ್ತು ಸಣ್ಣ ನೀರಾವರಿ ಇಲಾಖೆ, ಕಲಬುರಗಿರವರಿಗೆ ಜೇವರ್ಗಿ ತಾಲೂಕಿನ ಮದ್ರಿ ಗ್ರಾಮದಿಂದ ಉದ್ದೇಶಿತ ಜವಳಿ ಪಾರ್ಕ್‌ಗೆ 3.63 MLD ಪ್ರಮಾಣದ ನೀರು ಹರಿಸುವ ಸಲುವಾಗಿ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ಕಲಬುರಗಿ ವಿಭಾಗರವರು ಈಗಾಗಲೇ ಸರ್ವೆಯನ್ನು ಪೂರ್ಣಗೊಳಿಸಿದ್ದು, Survey, Drawing, Design ಕಾರ್ಯಪೂರ್ಣಗೊಂಡಿರುತ್ತದೆ.

- ಪರಿಷ್ಕೃತ ರೂ.152.29 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿ, ಮಂಡಳಿಯ ತಾಂತ್ರಿಕ ಸಲಹಾ ಮತ್ತು ಟೆಂಟರ್ ಪರಿಶೀಲನಾ ಸಮಿತಿಯಲ್ಲಿ ಮಂಡಿಸಲಾಗಿದ್ದು, ಕೆಲವು ತಿದ್ದುಪಡಿ ಮಾಡಿಕೊಡಲು ಸಲಹೆ ನೀಡಲಾಗಿದ್ದು, ಅದರಂತೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಲಬುರಗಿರವರು ಕ್ರಮವಹಿಸಿರುತ್ತಾರೆ.

- ಕೆ.ಪಿ.ಟಿ.ಸಿ.ಎಲ್ ಕಲಬುರಗಿರವರು ಉದ್ದೇಶಿತ ಜವಳಿ ಪಾರ್ಕ್‌ಗೆ 180 MW ವಿದ್ಯುತ್ ಸರಬರಾಜು ಮಾಡಲು ಸಲ್ಲಿಸಿರುವ ರೂ.229.288 ಕೋಟಿಗಳ ವಿಸ್ತೃತ ಯೋಜನಾ ವರದಿ ಹಾಗೂ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

- ಕೆ.ಪಿ.ಟಿ.ಸಿ.ಎಲ್, ಕಲಬುರಗಿರವರು ಸರ್ವೆ ಕೆಲಸವನ್ನು ಹಮ್ಮಿಕೊಳ್ಳಲು ಅದಕ್ಕೆ ತಗಲುವ ವೆಚ್ಚ ರೂ.7.11 ಲಕ್ಷಗಳನ್ನು ಮತ್ತು Soil Resistivity test ಗಾಗಿ ತಗಲುವ ವೆಚ್ಚ ರೂ.7,87,652/- ಗಳ ಶುಲ್ಕವನ್ನು ಜಮಾ ಮಾಡಲು ಕೋರಿರುತ್ತಾರೆ.

- ಕೆಪಿಟಿಸಿಎಲ್ ಕಲಬುರಗಿ ಅಧಿಕಾರಿಗಳು ಜಿಯೋಟೆಕ್ಸ ಮೀಕ್ಷೆ ಮತ್ತು ಬ್ಲಾಕ್ ಮಟ್ಟದ ಸಮೀಕ್ಷೆಯನ್ನು ಪೂರ್ಣಗೊಳಿಸಿದ್ದಾರೆ ಮತ್ತು ವಿನ್ಯಾಸ ಅನುಮೋದನೆಗಾಗಿ ತಮ್ಮ ಕಾರ್ಪೊರೇಟ್ ಕಚೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. (ರೂ.14.99 ಲಕ್ಷಗಳು)

- 01 ಸಂಖ್ಯೆಯ 220 ಕೆವಿ ವಿದ್ಯುತ್ ಕೇಂದ್ರ ಹಾಗೂ 04 ಸಂಖ್ಯೆಯ 110 ಕೆವಿ ವಿದ್ಯುತ್ ಕೇಂದ್ರ ಮತ್ತು ಪ್ರಸರಣ ಮಾರ್ಗದ DPR (Detailed Project Report) ಸ್ಥಾಪಿಸಲು ವಿವರವಾದ ಯೋಜನಾವರದಿಯನ್ನು ಸಿದ್ಧಪಡಿಸಲಾಗುತ್ತಿದೆ.

- ಜವಳಿ ಇಲಾಖೆಯು ಕೆಪಿಟಿಸಿಎಲ್‌ರವರ ಕೋರಿಕೆಯ ಮೇರೆಗೆ 2 ಟರ್ಮಿನಲ್ ಬೇ (ಟಿಬಿ) ಹಂಚಿಕೆಗೆ ಅನುಮತಿ ನೀಡಿದೆ.

- ಆಯ್ಕೆಯಾದ Transaction Advisor ಆದ **M/s. Wazir Advisors** ರವರು Master Developer ಅನ್ನು ಆಯ್ಕೆ ಮಾಡಲು ಸಿದ್ಧಪಡಿಸಿರುವ RFP (Request for Proposal) ಮತ್ತು DCA (Draft Concession Agreement) ದಾಖಲಾತಿಗಳನ್ನು ರಾಜ್ಯ ಸರ್ಕಾರದ ಕಾನೂನು ಇಲಾಖೆಯಿಂದ ದಿನಾಂಕ: 22.07.2025 ರಂದು ಅನುಮೋದನೆಯನ್ನು ನೀಡಲಾಗಿರುತ್ತದೆ.

- M/s. Hubert Enviro Care Systems Pvt Ltd, Chennai, Tamilunadu ಈ ಸಂಸ್ಥೆಗೆ ದಿನಾಂಕ: 01.10.2024 ರಂದು PM-MITRA Park ನ Environmental Impact Assessment ಮಾಡಲು Environmental Clearance (EC) ನ್ನು ಪಡೆಯುವ ಸೇವೆ ಒದಗಿಸಲು ಕಾರ್ಯಾದೇಶ ನೀಡಲಾಯಿತು.

- ದಿನಾಂಕ: 27.10.2025 ರಂದು Environmental Clearance (EC) ನ್ನು ಪಡೆಯಲಾಗಿದೆ ಹಾಗೂ ದಿನಾಂಕ:10.11.2025 ರಂದು ಕರ್ನಾಟಕ ರಾಜ್ಯ ಪರಿಸರ ಮಂಡಳಿರವರಿಂದ Consent for Establishment (CFE) ಪಡೆಯಲು KSPCB (Karnataka State Pollution Control Board) Portal ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

- ಮುಂದುವರೆದು, Master Developer ಆಯ್ಕೆಗಾಗಿ ಸಿದ್ಧಪಡಿಸಿರುವ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜವಳಿ ಮಂತ್ರಾಲಯ, ಭಾರತ ಸರ್ಕಾರರವರು National Industrial Corridor Development Corporation (NICDC) ನಿಗಮದಿಂದ ಕೇಂದ್ರ ಸರ್ಕಾರದ PPPAC (Public-Private Partnership Appraisal Committee) ಸಮಿತಿ ಸಭೆಯ ಅನುಮೋದನೆ ಪ್ರಗತಿಯಲ್ಲಿದೆ. ಅನುಮೋದನೆ ಪಡೆದ ನಂತರ ಜಾಗತಿಕ ಟೆಂಡರ್ ಮೂಲಕ Master Developer (MD) ಅನ್ನುಆಯ್ಕೆ ಮಾಡಿ ಅನುಷ್ಠಾನಗೊಳಿಸಲು ಅನುಮೋದನೆ ದೊರೆತ ನಂತರ ಶೀಘ್ರ ಕ್ರಮವಹಿಸಲಾಗುವುದು.

ಸಂಖ್ಯೆ : CI. ೨೧೧.JAKE.2025

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು